**ಇಂದು ದಿನಾಂಕ 07.08.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ನಂ. 4 ಮತ್ತು 5 ರಿಂದ 7 ರ ಪರ ವಕೀಲರಿಂದಃ**

9. ಕೆಂಪಮ್ಮ ಇವರ ತಂದೆ ತಾಯಿ ಹೆಸರುಗಳು ಹುಚ್ಚಪ್ಪ ಮತ್ತು ಸುಬ್ಬಮ್ಮ. ಸದರಿಯವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಕೆಂಪಮ್ಮನ ತಂಗಿ ಮುನಿಯಮ್ಮ ಎಂದು ತೋರಿಸಲು ಚುನಾವಣೆ ಪಟ್ಟಿಯನ್ನು ಹಾಜರು ಮಾಡಿರುತ್ತೇನೆ. ಯಾವುದೇ ಆಧಾರವಿಲ್ಲದೆ ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ಅಕ್ಕ ತಂಗಿಯರು ಅಲ್ಲ ಎಂದರೆ ಸರಿಯಲ್ಲ. ದಾವೆಯ ಸಲುವಾಗಿ ನನ್ನ ತಾಯಿಯಿಂದ ಈ ರೀತಿ ಸುಳ್ಳು ಹೇಳಿಸುತ್ತಿದ್ದೇನೆ ಎಂದರೆ ಸರಿಯಲ್ಲ.

10. ಮುನಿಯಮ್ಮನ ಮರಣ ಪ್ರಮಾಣ ಪತ್ರದಲ್ಲಿ ತಂದೆ ತಾಯಿ ಹೆಸರು ನಮೂದು ಆಗಿಲ್ಲ ಎಂದರೆ ಗಂಡ ಬಸ್ಸಪ್ಪನ ಹೆಸರು ಇದೆ ಎಂದು ಹೇಳುತ್ತಾರೆ. ಕೆಂಪಮ್ಮ ಇವರು ಬದುಕಿದ್ದಾಗಲೇ ಬಸ್ಸಪ್ಪ ಇವರು ಮುನಿಯಮ್ಮ ಇವರನ್ನು ಮದುವೆ ಮಾಡಿಕೊಂಡಿದ್ದಾರೆ. ಸದರಿಯವರದು ಮೊದಲನೇ ಪತ್ನಿ ಜೊತೆ ವಿಚ್ಛೇದನ ಆಗಿರಲಿಲ್ಲ.

11. ನನ್ನ ಪ್ರಮಾಣ ಪತ್ರದ 3, 4 ಮತ್ತು 5 ನೇ ಖಂಡಿಕೆಯ ವಿಷಯ ಸಂಗತಿಗಳು ನನ್ನ ತಾಯಿ ಬದುಕಿದ್ದಾಗ ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸುಳ್ಳು. ವಿಭಾಗದ ಸಲುವಾಗಿ ಈ ರೀತಿ ಸುಳ್ಳು ಸಂಗತಿಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ.

12. ನಿ.ಪಿ.22 ರಲ್ಲಿ ಕಂಡು ಬರುವ ಗ್ರಾಮ ಲೆಕ್ಕಾಧಿಕಾರಿಯ ನುಡಿ ಸಾಕ್ಷ್ಯವನ್ನು ಮಾಡಿಸಲು ಆಗುವುದಿಲ್ಲ, ಕಾರಣ ದಾಖಲೆಯನ್ನು ಕೊಟ್ಟಿದ್ದೇವೆ. ಮುತ್ತೂರು ಬಸ್ಸಪ್ಪನ ಮಗನಿಗೆ ಅವರ ಆಸ್ತಿ ಸೇರಿಬೇಕಾಗಿದದು, ಮುನಿಯಮ್ಮನಿಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಮುನಿಯಮ್ಮ ಬಸ್ಸಪ್ಪನ ಹೆಂಡತಿ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಆದ್ದರಿಂದ ಸದರಿ ಮುನಿಯಮ್ಮನ ಮಗಳಾದ ಮುನಿತಾಯಮ್ಮನಿಗೆ ಮತ್ತು ಅವರ ಮಕ್ಕಳಿಗೆ ಸದರಿ ಬಸ್ಸಪ್ಪನ ಆಸ್ತಿಗಳಲ್ಲಿ ಯಾವುದೆಲ ಹಕ್ಕು ಇರುವುದಿಲ್ಲ, ಆದ್ದರಿಂದ ವಿಭಾಗ ಕೇಳಲು ಕಾನೂನು ಅಡಿಯಲ್ಲಿ ಅವಕಾಶ ಇಲ್ಲ ಎಂದರೆ ಸರಿಯಲ್ಲ.

13. ಪ್ರತಿವಾದಿ ನಂ.5 ರಿಂದ 7 ಇವರು ಪಡೆದ ಕ್ರಯ ಪತ್ರಕ್ಕೆ ಅಭ್ಯಂತರ ಇರುವುದಿಲ್ಲ ಎಂದರೆ ಸಾಕ್ಷಿದಾರರು ಮೋಸ ಪೂರಿತವಾಗಿ ಮಾಡಿಕೊಂಡಿರುವ ದಾಖಲೆ ಎನ್ನುತ್ತಾರೆ. ಸದರಿ ಕ್ರಯ ಪತ್ರ ನಾತೆಯಿಂದ ಪ್ರತಿವಾದಿ ನಂ.5 ರಿಂದ 7 ಇವರು ಸಂಪೂರ್ಣ ಮಾಲೀಕರು ಎಂದರೆ ಸರಿಯಲ್ಲ.

14. ಮುತ್ತೂರು ಬಸ್ಸಪ್ಪ ಇವರ ಸಹೋದರಿಯ ವಾರಸುದಾರರು ಈ ದಾವೆಗೆ ಅವಶ್ಯಕ ಪಕ್ಷಗಾರರು ಎಂದರೆ ಸರಿಯಲ್ಲ. ಸದರಿಯವರನ್ನು ಸೇರ್ಪಾಟು ಮಾಡಿದರೆ ಸಂಬಂಧಗಳ ಕುರಿತು ನಿಜಾಂಶ ಹೊರಬೀಳುತ್ತದೆ ಎಂದು ಉದ್ದೇಶಪೂರ್ವಕವಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.4 ರ ಪರವಾಗಿ ಕಾನೂನಾತ್ಮಕ ಪ್ರಶ್ನೆಗಳುಃ

15. Section 18 of HSA ರ ಪ್ರಕಾರ ನನ್ನ ತಾಯಿಯ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ನಾವುಗಳು ಕ್ಲಾಸ್ 1 Legal heirs ಆಗುವುದಿಲ್ಲ, ಆದ್ದರಿಂದ ದಾವಾ ಸ್ವತ್ತುಗಳಲ್ಲಿ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**